ದಿನಾಂಕಃ 06.12.2016 ರಂದು ಸಾಕ್ಷಿಯನ್ನು ಪುನಹಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಿಂದ

7 ಮಂದಿ ಸೇರಿ ನಾವು ದಾವೆ ಮಾಡಿರುತ್ತೇವೆ. ಉಳಿದ ಪ್ರತಿವಾದಿಗಳು ನನಗೆ ಸಾಕ್ಷಿ ನುಡಿಯಲು ನನಗೆ ಅಧಿಕಾರ ಪತ್ರ ಕೊಟ್ಟಿಲ್ಲ. 3 ಮಂದಿಗಳ ವಿರುದ್ದ ನಾವು ದಾವೆ ದಾಖಲು ಮಾಡಿರುತ್ತೇವೆ. ನಾನು ಸ್ವಂತ ಬುದ್ದಿಯಿಂದ ದಾವೆಗೆ ಮಾಹಿತಿಯನ್ನು ಕೊಟ್ಟಿದ್ದೆ. ಎರಡು ಸರ್ವೆ ನಂಬರಗಳ ಮೇಲೆ ದಾವೆ ಮಾಡಿರುತ್ತೇನೆ. ಅವುಗಳ ಸರ್ವೆ ನಂ. 19, 7 ಎಕರೆ 6 ಗುಂಟೆ ಇರುತ್ತದೆ. ಅದರ ಚಕ್ಕಬಂದಿ ನನಗೆ ಮಾಹಿತಿ ಇಲ್ಲ. ಇನ್ನೊಂದು ಸರ್ವೆ ನಂ. 46, ಒಟ್ಟು 12 ಎಕರೆ ಇರುತ್ತದೆ. ಆ ಆಸ್ತಿಯ ಪೂ-ದಲ್ಲಿ ದುಂಡಪ್ಪ ಹೊಸಳ್ಳಿಯವರ ಆಸ್ತಿ, ಪ-ಕ್ಕೆ ಲಕ್ಷವ್ವ ಚೌಡಾಳರವರ ಆಸ್ತಿ, ಉ-ಕ್ಕೆ ಪುತ್ರಪ್ಪ ಮಗಡಿರವರ ಆಸ್ತಿ, ದ-ಕ್ಕೆ ನಮ್ಮ ಆಸ್ತಿ ಇರುತ್ತದೆ. ದಾವಾ ಆಸ್ತಿಯ ಪೂರ್ವದಲ್ಲಿ ನಮ್ಮ ಅಜ್ಜನ ತಾಯಿ ಹೆಸರಿನಲ್ಲಿ ಇತ್ತು.

ನನ್ನ ಅಜ್ಜನ ಹೆಸರು ಪಕ್ಕಿರಸಾಬ ವಾಲೀಕಾರ. ಆ ಆಸ್ತಿಯು ನಮ್ಮ ತಂದೆಗೆ ಇನಾಮ ಮೂಲಕ ಬಂದಿತ್ತು. 1971 ರಿಂದ ಚಾಕರಿ ಮಾಡುತ್ತಿದ್ದರು. 3 ಮಂದಿ ವಿರುದ್ದ ದಾವೆ ಮಾಡುವಾಗ ನಾನು ಜಮೀನಿನ ಉತಾರವನ್ನು ನೋಡಿದ್ದೇನೆ. ಆ ಜಮೀನಿನ ಉತಾರದಲ್ಲಿ ಮಾಲೀಕರು ಮತ್ತು ಕಬ್ಜೆದಾರರಾಗಿ ನಾವೇ ಇದ್ದೆವು. ಮಾಲಕರು ಮತ್ತು ಕಬ್ಜೆದಾರರು ನಾವೇ ಇದ್ದರೂ ಸಹ ಹೊಲ ಅವರು ಮಾಡುತ್ತಿದ್ದರಿಂದ ದಾವೆ ಮಾಡುವ ಕಾರಣ ಉಂಟಾಯಿತು.

ದಾವಾ ಆಸ್ತಿ ಎ, ಸಿ, ಡಿ ಅಂದರೆ ಸರ್ವೆ ನಂ. 46ಃ1, 46ಃ3 ಮತ್ತು ಸರ್ವೆ ನಂ.19 ರ ಆಸ್ತಿಗಳು ಪ್ರತಿವಾದಿಗಳ ಹೆಸರಿನಲ್ಲಿ ಇವೆ ಎಂದರೆ ನಮ್ಮ ಹೆಸರಿನಲ್ಲಿ ಇವೆ ಎಂದು ಸಾಕ್ಷಿ ನುಡಿಯುತ್ತಾರೆ. ಸುಮಾರು 40-50 ವರ್ಷಗಳ ಹಿಂದಿನಿಂದಲೂ ಪ್ರತಿವಾದಿಗಳ ಹೆಸರಿನಲ್ಲಿ ಇವೆ ಎಂದರೆ ನಮ್ಮ ಹೆಸರಿನಲ್ಲಿ ಇವೆ ಎಂದು ಸಾಕ್ಷಿ ನುಡಿಯತ್ತಾರೆ. ದಾವಾ ಆಸ್ತಿಗಳು ನಮ್ಮಹೆಸರಿನಲ್ಲಿ ಇವೆ ಮತ್ತು ಕಬ್ಜೆದಾರರು ನಾವೇ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೇವೆ. ಅವೆಂದರೆ ಡ ಉತಾರದ ದಾಖಲೆಗಳು ಆಗಿರುತ್ತವೆ.

ದಾವಲಸಾಬ ಪಕ್ಕೀರಸಾಬ ನನ್ನ ಅಜ್ಜ. ಅವರು ಯಾವಾಗ ಮೃತಪಟ್ಟರು ಎಂದು ನನಗೆ ಗೊತ್ತಿಲ್ಲ. ಸರ್ವೇ ನಂ.46ಃ1 ರ ಆಸ್ತಿಯು 1 ರಿಂದ 3ನೇ ಪ್ರತಿವಾದಿಗಳ ಆಸ್ತಿ ಆಗಿರುತ್ತದೆ ಎಂದರೆ ನಮ್ಮ ಆಸ್ತಿ ಆಗಿರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ಮೂಲತಃ ಈ ಆಸ್ತಿಗಳು ಗೌಸುಸಾಬ, ಇಮಾಮಸಾಬ, ಹುಸೇನಸಾಬ, ಅಕ್ಬರಬಾದಷಾ ಜಮಾಲಸಾಬ ವಾಲೀಕಾರ ಇವರ ಮಾಲ್ಕೀ ಜಮೀನು ಆಗಿತ್ತು ಎಂದರೆ ಸರಿ. ಹುಸೇನಸಾಬ ಜಮಾಲಸಾಬ ವಾಲೀಕರ ಅಂದರೆ ನಾನೇ. ದಿಃ 25.9.69 ರಂದು ಗೌಸುಸಾಬ ಹಾಗೂ ನನ್ನ ಅಣ್ಣಂದಿರು, ದೇವಕ್ಕ ಅಂಗಡಿಯವರಿಗೆ ಮಾರಾಟ ಮಾಡಿದ್ದರು ಎಂದರೆ ಸುಳ್ಳು. ಆ ಸಮಯದಲ್ಲಿ ನಾನು

ಹಾಗೂ ಅಕ್ಬರಬಾದಷಾ ಅಪ್ರಾಪ್ತರಾಗಿದ್ದು ನನ್ನ ಪರವಾಗಿ ನನ್ನ ಇಬ್ಬರು ಅಣ್ಣಂದಿರು ಮಾರಾಟ ಮಾಡಿದ್ದರು ಎಂದರೆ ಸುಳ್ಳು. ದೇವಕ್ಕ ಅಂಗಡಿಯವರು ಖರೀದಿ ಪೂರ್ವದಲ್ಲಿ ರೈತಾಪಿ ನಾತೆಯಿಂದ ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. ದೇವಕ್ಕರವರು ಖರೀದಿ ಹಿಡಿದ ಆಸ್ತಿಯ ಚಕ್ಕಬಂದಿಯ ಪೂ-ಕ್ಕೆ ಈರಪ್ಪ ಹೊಸಳ್ಳಿಯವರ ಜಮೀನು, ಪ-ಕ್ಕೆ ಚೌರವರ ಜಮೀನು, ಉ-ಕ್ಕೆ ಕುಂಕೂರ ದೇಸಾಯಿಯರವರ ಜಮೀನು, ಸರ್ವೆ ನಂ. 46 ರ ಚಕ್ಕಬಂದಿಯ ಪ್ರಕಾರ ಜಮೀನು ಎಂದರೆ ಸರಿಯಲ್ಲ. ತಲಾಟಿ ಇವರಿಗೆ ವರದಿ ಸಲ್ಲಿಸಿ ದೇವಕ್ಕರವರು ಅರ್ಜಿ ಸಲ್ಲಿಸಿದ್ದರು ಎಂದರೆ ಸುಳ್ಳು. ನಂತರ ಡ ನಂ. 1345 ರಂತೆ ದಾಖಲು ಆಗಿ ಖರೀದಿದಾರರ ಹೆಸರು ದಾಖಲು ಆಯಿತು ಎಂದರೆ ಸುಳ್ಳು. ಖರೀದಿಯ ದಿನದಿಂದಲೂ ಇಲ್ಲಿಯವರೆಗೆ ಖರೀದಿದಾರರಾದ ದೇವಕ್ಕರವರ ಹೆಸರು ದಾವಾ ಆಸ್ತಿಯಲ್ಲಿ ಮುಂದುವರೆದಿರುತ್ತದೆ ಎಂದರೆ ಸರಿಯಲ್ಲ. ಖರೀದಿದಾರರಾದ ದೇವಕ್ಕರವರಿಗೆ ಮಕ್ಕಳು ಇಲ್ಲದ ಕಾರಣ ಲಕ್ಷಪ್ಪ ಕನ್ನೂರ ಎನ್ನುವರನ್ನು ದತ್ತಕ ಜನಕ ಪತ್ರವನ್ನು ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ದಿಃ 17.8.61 ರಂದು ದತ್ತಕ ಪತ್ರ ನೋಂದಾವಣಿ ಅಗಿರುತ್ತದೆ ಎಂದರೆ ಸುಳ್ಳು. ಆ ಪ್ರಕಾರ ಬಸವನಹಾಳ ಗ್ರಾಮದ ಡ ನಂ. 1645 ದಾಖಲು ಆಗಿದೆ ಎಂದರೆ ಸುಳ್ಳು.

ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.